**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 363 |
| ಉತ್ತರಿಸುವ ದಿನಾಂಕ | 11-12-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶರವಣ ಟಿ.ಎ.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರ ಸುರಭಿ ಯೋಜನೆ (ಸೂಕ್ಷ್ಮ ರಕ್ಷಣಾ ಅಭಿಲೇಖ) ಯನ್ನು ಯಾವ ವರ್ಷದಿಂದ ಜಾರಿಗೆ ತಂದಿದೆ ಹಾಗೂ ಈ ಯೋಜನೆಗೆ ಕಳೆದ 05 ವರ್ಷಗಳಿಂದ ಇಲ್ಲಿಯವರೆಗೆ ಎಷ್ಟು ಅನುದಾನ ಮೀಸಲಿರಿಸಿದೆ; (ವರ್ಷವಾರು ಮಾಹಿತಿ ನೀಡುವುದು) | 1. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪಾರಂಪಾರಿಕ ಕಾನೂನಾತ್ಮಕ ದಾಖಲೆಗಳನ್ನು ಸುರಭಿ ಎಂಬ ನಾಮದಡಿ ಹಂತ-ಹಂತವಾಗಿ ಸ್ಕ್ಯಾನಿಂಗ್ ಮತ್ತು ಡಿಜಿಟೈಜ್ ಮಾಡಿ ಸಂರಕ್ಷಿಸಿಡಲು 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿರುತ್ತದೆ.<br><br>2. ಕಳೆದ 05 ವರ್ಷಗಳಿಂದ ಇಲ್ಲಿಯವರೆಗೆ ಸದರಿ ಯೋಜನೆಗೆ ಮೀಸಲಿರಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ.<br><br>**ವರ್ಷ** — **ಅನುದಾನ**<br>2019-20 — -<br>2020-21 — -<br>2021-22 — -<br>2022-23 — ರೂ.15 ಕೋಟಿಗಳು<br>2023-24 — - |
| ಆ) | ಈ ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ಎಷ್ಟು Volumeಗಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ; (ತಾಲ್ಲೂಕುವಾರು ಮತ್ತು ಇಲಾಖಾವಾರು ಮಾಹಿತಿ ನೀಡುವುದು) ಒಂದು ವೇಳೆ ಈ ಯೋಜನೆಗೆ ಸಂಬಂಧಿಸಿದ ಕಡತಗಳು ಕಾಣೆಯಾದ /ಹಾಳಾದ ಪ್ರಕರಣದಲ್ಲಿ ಅನುಸರಿಸುವ ಪ್ರಕ್ರಿಯೆಗಳಾವುದು; | 1. ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣ ಯೋಜನೆಯನ್ನು ಪೈಲಟ್ ಆಧಾರದ ಮೇಲೆ ಗಾಂಧಿನಗರ ಉಪನೋಂದಣಿ ಕಛೇರಿಯಲ್ಲಿ ಕೈಗೊಳ್ಳಲಾಗಿದ್ದು, ಸದರಿ ಕಛೇರಿಯಲ್ಲಿ ಒಟ್ಟು 33,14,414 ಪುಟಗಳ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಲಾಗಿರುತ್ತದೆ.<br>2. ಸದರಿ ಕಛೇರಿಯಲ್ಲಿ ಲಭ್ಯವಿರುವ ಹಾಗೂ ಸುಸ್ಥಿತಿಯಲ್ಲಿರುವ ಸಂಪುಟಗಳನ್ನು ಮಾತ್ರ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣ ಕಾರ್ಯಕ್ಕೆ ಒಳಪಡಿಸಲಾಗಿದೆ. |
| ಇ) | ಈ ಯೋಜನೆಯ ಡಿಜಿಟಲೀಕರಣಗೊಳಿಸಲು ಎಷ್ಟು Volumeಗಳ ದಾಖಲೆಗಳು ಬಾಕಿ ಇವೆ; ಬಾಕಿ ಇರಲು ಕಾರಣಗಳೇನು; ಹಾಗೂ ಯಾವ ಕಾಲಮಿತಿಯಲ್ಲಿ ಎಲ್ಲಾ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗುವುದು? | ರಾಜ್ಯದಲ್ಲಿ ಇರುವ 258 ಉಪನೋಂದಣಿ ಕಛೇರಿಗಳ ಪೈಕಿ 207 ಕಛೇರಿಗಳಲ್ಲಿ ಹಳೆಯ ಹಾಗೂ ಶಾಶ್ವತ ದಾಖಲೆಗಳು ಇರುತ್ತವೆ. ಸದರಿ ಕಛೇರಿಗಳಲ್ಲಿರುವ ಅಂದಾಜು 5.3 ಲಕ್ಷ ಸಂಪುಟಗಳಲ್ಲಿ 26.5 ಕೋಟಿ ಪುಟಗಳ ದಾಖಲೆಗಳನ್ನು ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣಗೊಳಿಸಬೇಕಾಗಿರುತ್ತದೆ. ಸದರಿ ದಾಖಲೆಗಳನ್ನು ಹಂತ ಹಂತವಾಗಿ ಡಿಜಿಟಲೀಕರಣಗೊಳಿಸಲಾಗುವುದು. |

ಕಂಇ/234/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು